**ಸಾಕ್ಷಿಯನ್ನು ದಿನಾಂಕಃ 31-01-2026 ರಂದು ಪುನಃ ಕರೆದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎಮ್.ಎಸ್.ಎಚ್ ವಕೀಲರಿಂದ.**

ನಮ್ಮ ತಂದೆಯ ಹೆಸರು ಅಪ್ಪಣ್ಣ ಹನಮಪ್ಪ ಪಂಚಗಾಂವಿ ಇರುತ್ತದೆ. ನಮ್ಮ ತಂದೆ ತೀರಿಕೊಂಡಿರುತ್ತಾರೆ ಎಂದರೆ ಸರಿ. ಪ್ರತಿವಾದಿ ನಂ.1 ಯಲ್ಲವ್ವ ನನ್ನ ತಾಯಿಯಾಗಬೇಕು. ವಾದಿ ನನಗೆ ತಮ್ಮ ಆಗಬೇಕು. ಪ್ರತಿವಾದಿ ನಂ.3 ನನ್ನ ತಂಗಿ, ಪ್ರತಿವಾದಿ ನಂ.4 ನನ್ನ ಹೆಂಡತಿ ಎಂದರೆ ಸರಿ. ಮೃತ ಅಪ್ಪಣ್ಣ ಮತ್ತು ಪ್ರತಿವಾದಿ ನಂ.1 ರವರಿಗೆ ನಾನು ಮತ್ತು ವಾದಿ ಗಂಡು ಮಕ್ಕಳು ಮತ್ತು ಪ್ರತಿವಾದಿ ನಂ.3 ಹೆಣ್ಣು ಮಗಳು ಆಗಬೇಕು ಎಂದರೆ ಸರಿ.

ನಮ್ಮ ತಂದೆ ತೀರಿಕೊಂಡ ನಂತರ ನಮ್ಮ ಮನೆತನದ ಹಿರಿತನವನ್ನು ನಾನೇ ಮಾಡುತ್ತಿದ್ದೆ ಎಂದರೆ ಸರಿ. ದಾವಾ ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳು ಆಗಿರುತ್ತವೆ ಎಂದರೆ ಸಾಕ್ಷಿಯು ವಿಪಿಸಿ ಆಸ್ತಿ ನಂ.5 ಮತ್ತು 495 ಇವುಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳು ಆಗಿರುತ್ತವೆ ಮತ್ತು ವಿಪಿಸಿ ನಂ.316/1 ಮತ್ತು 316/2 ಇವುಗಳು ನಮ್ಮ ದೊಡ್ಡಪ್ಪನಾದ ಲಕ್ಷ್ಮಪ್ಪ ಪಂಚಗಾವಿ ಇವರಿಗೆ ಸಂಬಂಧಿಸಿದ ಆಸ್ತಿಗಳು ಆಗಿದ್ದವು ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ನಮ್ಮ ಮತ್ತು ವಾದಿಯ ನಡುವೆ ಇಲ್ಲಿಯವರೆಗೆ ವಾಟ್ನಿ ಆಗಿರುವುದಿಲ್ಲ ಎಂದರೆ ಸರಿ. ನಮ್ಮ ದೊಡ್ಡಪ್ಪನಾದ ಲಕ್ಷ್ಮಣ ಇವನ ಹೆಸರಿನಲ್ಲಿ ವಿಪಿಸಿ ನಂ.316 ಮನೆ ಆಸ್ತಿ ಇತ್ತು ಎಂದರೆ ಸರಿ. ಲಕ್ಷ್ಮಪ್ಪನ ಹೆಂಡತಿ ಹೆಸರು ನನಗೆ ಮಾಹಿತಿ ಇರುವುದಿಲ್ಲ. ನನ್ನ ದೊಡ್ಡಪ್ಪನ ಹೆಂಡತಿ ತೀರಿಕೊಂಡಿರುತ್ತಾಳೆ ಎಂದರೆ ಸಾಕ್ಷಿಯು ನಾನು ಹುಟ್ಟಿದಾಗಿನಿಂದಲೂ ಅವಳನ್ನು

ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ-1 ಮೃತ್ಯು ಪತ್ರದ ಪ್ರಕಾರ ಮೃತ ಲಕ್ಷ್ಮಪ್ಪ ಇವನ ಹೆಂಡತಿಯಾದ ಸಾಯವ್ವ ಇವಳು ಈಗ ಸುಮಾರು 10-15 ವರ್ಷಗಳ ಹಿಂದೆ ತೀರಿಕೊಂಡಿರುತ್ತಾಳೆ ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ನಿಡಿ-1 ಮೃತ್ಯು ಪತ್ರದಲ್ಲಿ ಲಕ್ಷ್ಮಪ್ಪ ಮತ್ತು ಸಾಯವ್ವ ಇವರಿಗೆ ಯಾವುದೇ ಮಕ್ಕಳು ಆಗಿರುವುದಿಲ್ಲ ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪ ಲಕ್ಷ್ಮಪ್ಪ ಇವನು ತನ್ನನ್ನು ತನ್ನ ಸಹೋದರನಾದ ಕುಷ್ಣಪ್ಪ ಇವನು ನೋಡಿಕೊಳ್ಳುತ್ತಾನೆ ಎಂದು ನಿಡಿ-1 ಮೃತ್ಯು ಪತ್ರಕ್ಕಿಂತ ಮುಂಚೆ ಅವನ ಹೆಸರಿನಲ್ಲಿ ವಿ.ಪಿ.ಸಿ ನಂ.316 ಕ್ಕೆ ಸಂಬಂದಿಸಿದಂತೆ ಹಕ್ಕು ಪತ್ರ ಮಾಡಿದ್ದನು ಎಂದರೆ ಸರಿ. ತದನಂತರ ಕುಷ್ಣಪ್ಪ ಇವನ ಮಕ್ಕಳಾದ ದಶರಥ ಮತ್ತು ಮುತ್ತಪ್ಪ ಇವರು ವಾಟ್ನಿ ಪ್ರಕಾರ ಸದರಿ ಆಸ್ತಿಗೆ ತಮ್ಮ ಹೆಸರುಗಳನ್ನು ದಾಖಲ ಮಾಡಿಕೊಂಡಿದ್ದರು ಎಂದರೆ ಸರಿ. ತದನಂತರ ಸದರಿ ಕುಷ್ಣಪ್ಪ ಮತ್ತು ಅವನ ಮಕ್ಕಳಾದ ದಶರಥ ಹಾಗೂ ಮುತ್ತಪ್ಪ ಇವರು ನನ್ನ ದೊಡ್ಡಪ್ಪ ಆದ ಲಕ್ಷ್ಮಪ್ಪ ಇವನನ್ನು ನೋಡಿಕೊಳ್ಳದೆ ಇರುವುದರಿಂದ ತಾನು ಮಾಡಿದ ಹಕ್ಕು ಪತ್ರವನ್ನು ರದ್ದು ಮಾಡಿರುತ್ತಾನೆ ಎಂದರೆ ಸರಿ. ತದನಂತರ ವಿ.ಪಿ.ಸಿ ನಂ.316 ಇದು ನಮ್ಮ ದೊಡ್ಡಪ್ಪನಾದ ಲಕ್ಷ್ಮಪ್ಪ ಇವನ ಹೆಸರಿನಲ್ಲಿ ದಾಖಲಾಗಿರುತ್ತದೆ ಎಂದರೆ ಸರಿ.

ತದನಂತರ ನಾನು ಮತ್ತು ವಾದಿ ಕೂಡಿಕೊಂಡು ನಮ್ಮ ದೊಡ್ಡಪ್ಪನಾದ ಲಕ್ಷ್ಮಪ್ಪ ಇವರನ್ನು ಜೋಪಾನ-ಜತನ ಮಾಡಿರುತ್ತೇವೆ ಎಂದರೆ ಸಾಕ್ಷಿಯು ನಾನು ಮಾತ್ರ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ವಾದಿಯೂ ಸಹ ಸದರಿ ಲಕ್ಷ್ಮಪ್ಪ ಇವರಿಗೆ ಜೋಪಾನ-ಜತನ ಮಾಡಿದ್ದರು ಸಹಿತ ದಾವಾ ಆಸ್ತಿ ವಿ.ಪಿ.ಸಿ ನಂ.316 ಇದರಲ್ಲಿ ವಾದಿಗೆ ಪಾಲು ಹೋಗುತ್ತದೆ ಎಂದು ನಾನು ಒಬ್ಬನೆ ಜೋಪಾನ-ಜತನ ಮಾಡಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ದೊಡ್ಡಪ್ಪ ಲಕ್ಷ್ಮಪ್ಪ ಇವನು ತೀರಿಕೊಂಡು ಈಗ ಸುಮಾರು 20 ವರ್ಷಗಳು ಆಗಿರುತ್ತವೆ. ನನಗೆ ದಾವಾ ಆಸ್ತಿ ವಿ.ಪಿ.ಸಿ ನಂ.316 ಇದು ನಿಡಿ-1 ಮೃತ್ಯು ಪತ್ರದ ಪ್ರಕಾರ ಬಂದಿರುತ್ತದೆ. ನಿಡಿ-1 ಮೃತ್ಯು ಪತ್ರವನ್ನು ಲಕ್ಷ್ಮಪ್ಪ ಇವರು ಈಗ ಸುಮಾರು 25 ವರ್ಷಗಳ ಹಿಂದೆ ಮಾಡಿರುತ್ತಾರೆ. ಸದರಿ ದಾವಾ ಆಸ್ತಿ ನಮ್ಮ ದೊಡ್ಡಪ್ಪನಾದ ಲಕ್ಷ್ಮಪ್ಪ ಇವನ ಹೆಸರಿನಲ್ಲಿ ಇದ್ದುದ್ದರಿಂದ ಅದನ್ನು ಹೇಗಾದರೂ ಮಾಡಿ ಪಡೆಯಬೇಕು ಎಂಬ ಉದ್ದೇಶದಿಂದ ನಾನೇ ನಿಡಿ-1 ಮೃತ್ಯು ಪತ್ರವನ್ನು ಖೊಟ್ಟಿಯಾಗಿ ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ವಾದಿಗೆ ಅರ್ದ ಹಿಸ್ಸೆ ಹೋಗುತ್ತದೆ ಎಂದು ನಾನು ತಿಳಿದುಕೊಂಡು ತದನಂತರ ಸದರಿ ಆಸ್ತಿಯಲ್ಲಿ ಅರ್ಧ ಭಾಗವನ್ನು ನನ್ನ ಹೆಂಡತಿಯ ಹೆಸರಿಗೆ ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಹೆಂಡತಿಯ ಹೆಸರಿಗೆ ಆಶ್ರಯ ಯೋಜನೆಯಲ್ಲಿ ಮನೆ ಮಂಜೂರು ಆಗಿದ್ದರಿಂದ ಸದರಿ ಮನೆಯನ್ನು ಕಟ್ಟಲು ಜಾಗೆ ಬೇಕಾಗಿದ್ದರಿಂದ ಸದರಿ ಆಸ್ತಿಯಲ್ಲಿಯ ಅರ್ದ ಭಾಗವನ್ನು ನನ್ನ ಹೆಂಡತಿ ಹೆಸರಿಗೆ ಬಿಟ್ಟುಕೊಟ್ಟಿರುತ್ತೇನೆ, ತದನಂತರ ಸದರಿ ಆಸ್ತಿಯಲ್ಲಿ ಎರಡು ಭಾಗಗಳಾಗಿ ವಿ.ಪಿ.ಸಿ ನಂ.316/1 ಮತ್ತು 316/2 ಎಂದು ನಮೂದು ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯಲ್ಲಿಯ ವಾದಿಯ ಅರ್ದ ಹಿಸ್ಸೆಯನ್ನು ಎತ್ತಿ ಹಾಕಬೇಕೆಂಬ ಉದ್ದೇಶದಿಂದ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ತಂದೆ ಜೀವಂತ ಇರುವಾಗ ನಮಗೆ ಯಾವುದೇ ಪ್ರಾಪಂಚಿಕ ಅಡಚಣೆ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತೊಂದರೆ ಇದ್ದುದ್ದರಿಂದ ಮನೆಯನ್ನು ಮಾರಾಟ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನಮ್ಮ ತಂದೆಗೆ ಯಾವ ತೊಂದರೆ ಇತ್ತು ಎಂದರೆ ಸಾಕ್ಷಿಯು ಇದರ ಬಗ್ಗೆ ಹಿರಿಯರಿಗೆ ಮಾಹಿತಿ ಇತ್ತು ಎಂದು ನುಡಿಯುತ್ತಾರೆ. ನಮ್ಮ ತಂದೆಗೆ ಯಾವುದೇ ಸಮಯದಲ್ಲಿ ಹಣಕಾಸಿನ ಅಡಚಣೆ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆತನಕ್ಕೆ ಯಾವುದೇ ಅಡಚಣೆ ಇಲ್ಲದೆ ಇದ್ದರೂ ಸಹಿತ ನಾನು ದಾವಾ ಆಸ್ತಿ ನಂ.495 ನ್ನು ಪ್ರತಿವಾದಿ ನಂ.5 ರವರ ಗಂಡನಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಅಡಚಣೆ ಇತ್ತು ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ಖರೀದಿ ಕೊಡುವ ಸಮಯದಲ್ಲಿ ನಾನು ನನ್ನ ತಮ್ಮನಾದ ವಾದಿಯನ್ನು ಸಹ ಕರೆದುಕೊಂಡು ಹೋಗಿದ್ದೇನು ಎಂದರೆ ಸರಿ. ವಾದಿಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ಸಾಕ್ಷಿಯು ಅವರಿಗೆ ಓದಲು ಅಥವಾ ಬರೆಯಲು ಬರುತ್ತದೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ನನಗೆ ಏನು ಗೊತ್ತು ಎಂದು ನುಡಿಯುತ್ತಾರೆ. ವಾದಿಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದು ನನಗೆ ಗೊತ್ತಿದ್ದರೂ ಸಹಿತ ಈ ಮೇಲಿನ ರೀತಿ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಖರೀದಿ ಕೊಡುವ ದಿನ ನಾವು ವಾದಿಗೆ ನಮ್ಮ ಮನೆತನದ ಆಸ್ತಿಗಳಲ್ಲಿ ಪಾಲು ಮಾಡಿಕೊಳ್ಳೊನ ಅಂತಾ ನೊಂದಣಿ ಕಚೇರಿಗೆ ಕರೆದುಕೊಂಡು ಹೋಗಿ ಅವನ ಸಹಿಯನ್ನು ತೆಗೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿಯ ವಾದಿಯ ಹಿಸ್ತೆಯನ್ನು ಎತ್ತಿಹಾಕಬೇಕು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-

ಪ್ರಧಾನ ದಿವಾಣಿ ನ್ಯಾಯಾಧೀಶರು
ಮುಧೋಳ.

**ಸಾಕ್ಷಿಯ ಸಹಿಃ**

LAGAMA SHIVANAPPA HUKKERI

Digitally signed by LAGAMA SHIVANAPPA HUKKERI
Date: 2026.02.17 18:13:16 +0530